ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ
BENGALURU CENTRAL UNIVERSITY
Central College Campus, Dr. Ambedkar Veedhi, Bengaluru – 560 001.
Ph. No: 080 –22961016/ E-Mail ID: registrarbcu@gmail.com

ಸಂಖ್ಯೆ.ಬೆಂ.ಕೇ.ವಿ/ಆರ್.ಸಿ.ಕಾಲೇಜ್/2020-21/413 ದಿನಾಂಕ:28.01.2020

# ಸುತ್ತೋಲೆ

ವಿಷಯ: ಆಂತರಿಕ ಅಂಕಗಳನ್ನು ನೀಡುವಾಗ ವಿಶ್ವವಿದ್ಯಾಲಯ ನಿಗಧಿ ಪಡಿಸಿರುವ ಮಾನದಂಡಗಳನ್ನು ಅನುಸರಿಸುವ ಬಗ್ಗೆ.

ಉಲ್ಲೇಖ: ಸಿಂಡಿಕೇಟ್ ಸಭೆ ನಿರ್ಣಯ ದಿನಾಂಕ 19.10.2019.

*****

ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ವ್ಯಾಪ್ತಿಗೆ ಬರುವ ಕೆಲವು ಕಾಲೇಜುಗಳಲ್ಲಿ, ವಿದ್ಯಾರ್ಥಿಗಳಿಗೆ ಆಂತರಿಕ ಅಂಕಗಳನ್ನು (Internal Assessment Marks) ನೀಡುವಾಗ, ವಿಶ್ವವಿದ್ಯಾಲಯ ನಿಗಧಿ ಪಡಿಸಿರುವ ಮಾನದಂಡಗಳನ್ನು ಅನುಸರಿಸಬೇಕು. ಆದರೆ ಕೆಲವು ಕಾಲೇಜುಗಳು ಯಾವುದೇ ಮಾನದಂಡಗಳನ್ನು ಅನುಸರಿಸದಿರುವುದು ಹಾಗೂ ಇವುಗಳಿಗೆ ಸಂಭಂದಿಸಿದ ರೆಕಾರ್ಡುಗಳನ್ನು ನಿರ್ವಹಿಸದಿರುವುದು ಕಂಡು ಬಂದಿದೆ. ಆದುದರಿಂದ, ಇನ್ನು ಮುಂದೆ ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಕಾಲೇಜುಗಳು, ವಿಶ್ವವಿದ್ಯಾಲಯ ವಿಭಾಗಗಳು ಕಡ್ಡಾಯವಾಗಿ ವಿಶ್ವವಿದ್ಯಾಲಯ ನಿಗಧಿ ಪಡಿಸಿರುವ ನಿಯಮ/ ಮಾನದಂಡಗಳನ್ನು ಅನುಸರಿಸಿಯೇ ಆಂತರಿಕ ಅಂಕಗಳನ್ನು ನೀಡಬೇಕು ಮತ್ತು ಇವುಗಳಿಗೆ ಸಂಭಂದಿಸಿದ ಸೂಕ್ತ ದಾಖಲೆಗಳನ್ನು(ರೆಕಾರ್ಡ್ಸ್/ರಿಜಿಸ್ಟರ್ ಇತ್ಯಾಧಿ) ನಿರ್ವಹಿಸಬೇಕೆಂದು ಕೋರಲಾಗಿದೆ. ವಿಶ್ವವಿದ್ಯಾಲಯದ ನಿಯಮಗಳನ್ನು/ಸೂಚನೆಗಳನ್ನು ಪಾಲಿಸದಿರುವ ಕಾಲೇಜುಗಳ ಪ್ರಾಂಶುಪಾಲರ ಮೇಲೆ ಸೂಕ್ತ ಕ್ರಮ ಜರುಗಿಸಲಾಗುವುದು. ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾದರೆ, ಆಯಾ ಕಾಲೇಜು ಪ್ರಾಂಶುಪಾಲರೆ ಹೊಣೆಗಾರರಾಗುತ್ತಾರೆ.

ಕುಲಸಚಿವರು(ಮೌಲ್ಯಮಾಪನ)
29/01/2020

ಗೆ,

1. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಸಂಯೋಜನೆ ಹೊಂದಿರುವ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಎಲ್ಲಾ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳಿಗೆ/ ಕೋ-ಆರ್ಡಿನೇಟರುಗಳಿಗೆ.

ಪ್ರತಿಗಳು:

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
2. ಕುಲಪತಿ/ ಕುಲಸಚಿವ/ವಿತ್ತಾಧಿಕಾರಿಗಳ ವಿಶೇಷಾಧಿಕಾರಿಗಳು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು.
3. ವೆಬ್‌ಸೈಟ್ ನಿರ್ವಾಹಕರು, ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯ, ಬೆಂಗಳೂರು- ಈ ಸುತ್ತೋಲೆಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟಿನಲ್ಲಿ ಅಪ್ಲೋಡ್ ಮಾಡಲು ತಿಳಿಸಿದೆ.